ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ಇ-ಆಡಳಿತ-ವಾ.ಕ್ರಿ.ಯೋ./2013-14. ದಿನಾಂಕ:18-02-2014

ಜ್ಞಾಪನ

ವಿಷಯ: 2013-14ನೇ ಸಾಲಿಗೆ ಶಿಕ್ಷಣವಾಹಿನಿ ತಂತ್ರಾಂಶವನ್ನು ಉಪಯೋಗಿಸಲು ತರಬೇತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಸಿಬ್ಬಂದಿಗಳು/ ಅಧಿಕಾರಿಗಳಿಗೆ ನೀಡಲು ರಾಜ್ಯದ ಪ್ರತಿ ಡಯಟ್‌ನಿಂದ 02 ಮಾಸ್ಟರ್ ತರಬೇತಿದಾರರಿಗೆ ತರಬೇತಿ ನೀಡುವ ಬಗ್ಗೆ

ಉಲ್ಲೇಖ:1. ಸರ್ಕಾರದ ಅದೇಶ ಸಂಖ್ಯೆ ಇಡಿ 63 ಯೋಯಕ 2013 ದಿನಾಂಕ: 12-08-2013.

2. ಈ ಕಛೇರಿಯ ಸಮ ಸಂಖ್ಯೆ ಜ್ಞಾಪನ ದಿನಾಂಕ: 10-02-2014.

3. ಈ ಕಛೇರಿಯಿಂದ ಕಳುಹಿಸಿದ ಎಸ್.ಎಂ.ಎಸ್. ದಿನಾಂಕ: 17-02-2014

ಉಲ್ಲೇಖ(2) ರ ಈ ಕಛೇರಿಯ ಜ್ಞಾಪನದಲ್ಲಿ ಪ್ರಸ್ತಾಪಿಸಿದಂತೆ, ರಾಜ್ಯದ ಪ್ರತಿ ಡಯಟ್‌ನಿಂದ 02 ಹಿರಿಯ ಉಪನ್ಯಾಸಕರು/ಉಪನ್ಯಾಸಕರಿಗೆ ಮಾಸ್ಟರ್ ತರಬೇತಿದಾರರಿಗೆ ದಿನಾಂಕ: 20/21-02-2014 ಹಾಗೂ 24/25-02-2014 ರಂದು ಡಯಟ್, ಬೆಂಗಳೂರು ನಗರ ಜಿಲ್ಲೆ, ರಾಜರಾಜೇಶ್ವರಿ ನಗರ ಬೆಂಗಳೂರು ಇಲ್ಲಿ ತರಬೇತಿ ನೀಡಲು ಉದ್ದೇಶಿಸಲಾಗಿತ್ತು.

ಆದರೆ ಅನಿವಾರ್ಯ~~ಕಾರಣ~~ ಸದರಿ ದಿನಾಂಕಗಳಂದು ತರಬೇತಿ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗದ ಕಾರಣ ಸದರಿ ತರಬೇತಿ ಕಾರ್ಯವನ್ನು ಸಧ್ಯಕ್ಕೆ ರದ್ದುಗೊಳಿಸಲಾಗಿದೆ. ಈ ವಿಚಾರವಾಗಿ ಡಯಟ್ ಪ್ರಾಂಶುಪಾಲರಿಗೆಲ್ಲಾ ಈ ಕಛೇರಿಯಿಂದ ಎಸ್.ಎಂ.ಎಸ್ ಮೂಲಕ ಈಗಾಗಲೇ ತಿಳಿಸಲಾಗಿದೆ.

ಮುಂದಿನ ದಿನಾಂಕಗಳನ್ನು ಸಧ್ಯದಲ್ಲೇ ತಿಳಿಸಲಾಗುವುದು. ತದನಂತರ ಅದರಂತೆ ತಮ್ಮ ಡಯಟ್‌ಗಳಿಂದ 02 ಉಪನ್ಯಾಸಕರನ್ನು ಸದರಿ ತರಬೇತಿಗಾಗಿ ನಿಯೋಜಿಸಲು ಈ ಮೂಲಕ ಸೂಚಿಸಿದೆ. ತರಬೇತಿಗೆ ನಿಯೋಜಿಸುವಾಗ ಈ ಕಛೇರಿಯ ಜ್ಞಾಪನದಲ್ಲಿ ನಮೂದಿಸಿದ ಎಲ್ಲಾ ಷರತ್ತುಗಳು ಅನ್ವಯವಾಗುತ್ತದೆ.

ಅಪರ ಆಯುಕ್ತರು (ಆಡಳಿತ) (ಪ್ರಭಾರಿ)
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು ಇವರಿಗೆ ಮಾಹಿತಿಗಾಗಿ
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಹಾಗೂ ಗುಲ್ಬರ್ಗಾ ಆಯುಕ್ತಾಲಯ ಇವರಿಗೆ ಮಾಹಿತಿಗಾಗಿ
3. ರಾಜ್ಯದ ಎಲ್ಲಾ ಪ್ರಾಂಶುಪಾಲರು, ಡಯಟ್ ಇವರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ ಸಲ್ಲಿಸಿದೆ.
4. ಕಛೇರಿ ಪ್ರತಿ